ಉಪಾಧ್ಯಕ್ಷರು : ಇಷ್ಟು ಆಶ್ವಾಸನೆಯನ್ನು ಮಂತ್ರಿಗಳು ಕೊಟ್ಟ ಮೇಲೆ ತಾವು ತಮ್ಮ ಸ್ಥಳಕ್ಕೆ ಹೋಗುವುದು ಒಳ್ಳೆಯದು. ತಿಮ್ಮಪ್ಪನವರೇ ತಾವು ಹೇಳಿ, ಸರ್ಕಾರ ಇಷ್ಟು ಭರವಸೆ ಕೊಟ್ಟು ಮೇಲೂ ತಾವು ಈ ರೀತಿ ಮಾಡಿದರೆ ಹೇಗೆ? ತಾವು ಇದರ ಬಗ್ಗೆ ಮಾತನಾಡಬೇಕು.

ಅಧ್ಯಕ್ಷರ ಅಪ್ಪಣೆ ಮೇರೆಗೆ

ಜಿಲ್ಲಾ ಪುನರ್ ವಿಂಗಡಣೆಯಲ್ಲಿ ಆಗಿರುವ ತೊಂದರೆ ಕುರಿತು

+ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) : ಉಪಾಧ್ಯಕ್ಷರೆ, ತಾಲ್ಲೂಕು ಕ್ಷೇತ್ರವನ್ನು ಪುನರ್ ವಿಂಗಡಣೆ ಮಾಡುವ ಸಂದರ್ಭದಲ್ಲಿ ನಮ್ಮ ಮನಸ್ಸಿಗೆ ವಿರೋಧವಾದಂಥ ತೀರ್ಮಾನ ಮಾಡುವುದಕ್ಕೆ ಮುಂಚಿತವಾಗಿ ನಮಗೆ ಒಂದು ಅವಕಾಶವನ್ನು ಕೊಟ್ಟು ಚರ್ಚೆ ವಗೈರೆ ಮಾಡಿ ಮಾಡಬೇಕಾಗಿತ್ತು, ಏನು ಮಾಡದೇ ಮಾಡಿದ್ದಾರೆ ಅಂದರೆ ನಮಗೆ ಬುಲ್ಡೋಜಿಂಗ್ ಮಾಡಿದಂತೆ ಆಗುತ್ತದೆ. ಶಾಸಕರಾದಂಥವರಿಗೆ ಅಂತಹ ಪರಿಸ್ಥಿತಿ ಬಂದು ಒದಗಿದೆ ಅಂದರೆ, ಶಾಸಕರಲ್ಲದವರಿಗೆ ಏನು ಆಗಬಹುದಿತ್ತು ಎನ್ನುವುದನ್ನು ನಾವು ಊಹಿಸಬಹುದು. ಮಾನ್ಯ ಮುಖ್ಯಮಂತ್ರಿಗಳು ವಿಶೇಷವಾಗಿ ಇದರಲ್ಲಿ ಮುಂದಾಗಬೇಕು, ಶಾಸಕರು ಈ ಸದನದಲ್ಲಿ ಇದ್ದಾರೆ ಅವರು ಅನೇಕ ಮನವಿಗಳನ್ನು ಕೊಟ್ಟಿದ್ದಾರೆ. ಚರ್ಚೆ ಮಾಡಿದ್ದಾರೆ ಅವರನ್ನು ಕರೆಸಿ ಮಾತನಾಡಿ ಅವರಿಗೂ ಸಮಾಧಾನ ಪಡಿಸಿ ಒಂದು ತೀರ್ಮಾನ ತೆಗೆದುಕೊಳ್ಳುವುದು ಒಳ್ಳೆಯದು. ಕಂದಾಯ ಸಚಿವರು ಎಷ್ಟು ಜವಾಬ್ದಾರಿ ತೆಗೆದುಕೊಂಡರು ಮುಖ್ಯ ಮಂತ್ರಿಗಳು ಮಾತನಾಡಿದಂತೆ ಅದು ಪರಿಣಾಮಕಾರಿಯಾಗುವುದಿಲ್ಲ, ಕೆಲವು ಅನಿವಾರ್ಯವಾಗಿ ಅಂತಿಮವಾಗಿ ತೀರ್ಮಾನ ಮಾಡಲೇಬೇಕಾಗುತ್ತದೆ, ಜಿಗಜಿಣಗಿಯವರು ಹೇಳಿದ ರೀತಿಯಲ್ಲಿ ಒಂದು ತೀರ್ಮಾನ ಆಗಲೇಬೇಕು. ತೀರ್ಮಾನ ಮಾಡುವುದಾದರೂ ಕೂಡ ಒಬ್ಬ ಶಾಸಕರು ಇದ್ದಂಥ ಸಂದರ್ಭದಲ್ಲಿ....

ಶ್ರೀ ಎಸ್.ಎಸ್. ಪಾಟೀಲ್ : ಕಂದಾಯ ಸಚಿವರು ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿಸಿ ಮಾತನಾಡಿಸುವ ಜವಾಬ್ದಾರಿಯನ್ನು ತೆಗೆದುಕೊಂಡಿದ್ದಾರೆ. ಕಾಂದಾಯ ಸಚಿವರು ಜವಾಬ್ದಾರಿ ತೆಗೆದುಕೊಂಡ ಮೇಲೆ ತಾವೇನು ಹೇಳುತ್ತೀರಿ ಕಂದಾಯ ಮಂತ್ರಿಗಳು ಏನು ಹೇಳುತ್ತಾರೆ, ಅಂದರೇನು ಅವರೇ ಭೇಟಿ ಮಾಡಿಸುತ್ತೇನೆಂದು ಹೇಳಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ : ಈ ವಿಷಯ ಕಂದಾಯ ಸಚಿವರಿಗೆ ಸಂಬಂಧಪಟ್ಟದ್ದುದು ನಾನು ಇಲ್ಲಾ ಅಂತ ಹೇಳುವುದಿಲ್ಲ. ನಾವು ಸರ್ಕಾರವನ್ನು ಮಾಡಿದ್ದೇವೆ, ಇಲ್ಲಿಯೂ ಇದ್ದೇವೆ ಎಲ್ಲವನ್ನು ನಾವು ನೋಡಿದ್ದೇವೆ. ಅಂತಿಮವಾದ ತೀರ್ಮಾನ ಯಾರನ್ನು ಅವಲಂಭಿಸಿದೆ ಎನ್ನುವುದು ನಮಗೆಲ್ಲರಿಗೂ ಗೊತ್ತಿದೆ. ಅವರು ಇರಲಿ ಅವರ ಜೊತೆಯಲ್ಲಿ ಮುಖ್ಯ ಮಂತ್ರಿಗಳ ಜೊತೆ ಸಮಾಲೋಚನೆ ಮಾಡಲಿ, ಸರ್ಕಾರದ ಮೇಲೆ ತಾವು ಹೇಳುವ ವಿಶ್ವಾಸ ಉಳಿದಿಲ್ಲ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ಉಪಾಧ್ಯಕ್ಷರೆ, ಅವರು ಮುಖ್ಯಮಂತ್ರಿಗಳನ್ನು ಅನೇಕ ಸಲ ಭೇಟಿಯಾಗಿದ್ದಾರೆ. ಭೇಟಿಯಾದರೂ ಅವರು ಸೌಜನ್ಯಕ್ಕಾದರೂ ಕೂಡ ಮಾತನಾಡಿಲ್ಲವೆಂದರೆ ಅವರ ಮನಸ್ಸಿಗೆ ನೋವಾಗಿ ಅವರು ಈ ಪ್ರತಿಭಟನೆ ವ್ಯಕ್ತಪಡಿಸಿದ್ದಾರೆ.

ಉಪಾಧ್ಯಕ್ಷರು : ಅನಿವಾರ್ಯವಾಗಿ ನಾವು ಈ ಸಭೆಯನ್ನು ಮುಂದುವರೆಸಬೇಕಾಗುತ್ತದೆ. ಕಾಗೋಡು ತಿಮ್ಮಪ್ಪನವರು ವಿಧೇಯಕದ ಮೇಲೆ ಮಾತನಾಡಬೇಕು. ನಾನು ವಿನಂತಿ ಮಾಡಿದ್ದೇನೆ. ಸಂಬಂಧಪಟ್ಟ ಸಚಿವರು, ಸಹಕಾರ ಸಚಿವರು, ಸಾರಿಗೆ ಸಚಿವರು ಎಲ್ಲರೂ ಹೇಳಿದ್ದಾರೆ ಆದರೂ ಪದೇ ಪದೇ ಅದನ್ನೇ ಹೇಳಿದರೆ ಏನು ಮಾಡುವುದು.

ಶ್ರೀ ಕಾಗೋಡು ತಿಮ್ಮಪ್ಪ : ಅವರು ಜವಾಬ್ದಾರಿ ತೆಗೆದುಕೊಂಡು ಮಾಡಿದರೆ ಇದು ಸಾಧ್ಯತೆ ಇದೆ. ಅದು ಅವರಿಗೆ ಸೇರಿದ ವಿಷಯವಾಗಿದೆ. ಇಡೀ ರಾಜ್ಯಕ್ಕೆ ಸಂಬಂಧಪಟ್ಟ ವಿಷಯವಾಗಿದ್ದರೆ ಅದಕ್ಕೆ ಎಲ್ಲರೂ ಸೇರುತ್ತಿದ್ದರು. ಇದು ಏನಾಗಿದೆ ಆ ಮೂರು ಜನರ ಕ್ಷೇತ್ರಕ್ಕೆ ಸಂಬಂಧಪಟ್ಟ ವಿಷಯವಾಗಿರುವುದರಿಂದ, ಬೇರೆ ಶಾಸಕರು ಮತ್ತು ವಿರೋಧ ಪಕ್ಷದ ಶಾಸಕರು ಅದರಲ್ಲಿ ಸೇರುವುದಕ್ಕೆ ಅವಕಾಶ ಇಲ್ಲ. ಆಡಳಿತ ಪಕ್ಷ ಸದಸ್ಯರೂ ಕೂಡ ಅವರ ಬೆಂಬಲಕ್ಕೆ ನಿಲ್ಲುವಂತಿಲ್ಲ, ಈ ಸನ್ನಿವೇಶದಲ್ಲಿ ಈ ಸ್ಥಿತಿ ಇದೆ. ಅವರ ಕಡೆ ವಿಪ್ ಇದ್ದಾರೆ ಆ ಮೆಂಬರಿಗೆ ಹೇಳಿದರೆ ಒಬ್ಬರನ್ನಾದರೂ ಸೇರಿಸಬಹುದು. ಆಮೇಲೆ ಶ್ರೀಮಾನ್ ಕೃಷ್ಣಮೂರ್ತಿಯವರು ಇದ್ದಾರೆ. ನಮ್ಮ ಮುಖ್ಯಮಂತ್ರಿಗಳ ತೀರಾ ಪಕ್ಕದಲ್ಲಿರುವ ಅವರಿಗೆ ಎಲ್ಲಾ ಸಮಸ್ಯೆಯೂ ಕೂಡ ಗೊತ್ತಿದೆ. ಆದರೆ ಅವರೇ ಬೆಳಿಗ್ಗೆ ಏನ್ನೋ ಒಂದು ಸಭೆ ಇದೆ, ಅವಕಾಶ ಕೊಟ್ಟಿದ್ದಾರೆ, ಆದರೆ ಯಾವಾಗ ಕರೆಸುತ್ತಾರೋ ಏನೋ ಗೊತ್ತಾಗಿಲ್ಲವೆಂದು ಹೇಳಿದರು. ಅವರನ್ನು ನಾನು ಕಂಡಾಗಲೆ ಕೇಳಿದೆ.

ಉಪಾಧ್ಯಕ್ಷರು : ಅವರು ಭರವಸೆಯನ್ನು ಕೊಟ್ಟ ಮೇಲೆಯಾದರೂ ಅದನ್ನು ನಂಬಬೇಕಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಸರಿ ನಂಬಬೇಕು ವಿಶ್ವಾಸ ಇಡಲೇಬೇಕಾಗುತ್ತದೆ. ಇದನ್ನು ನಾನು ಒಪ್ಪುತ್ತೇನೆ. ಇದನ್ನು ತೀರ್ಮಾನ ಮಾಡುವುದು ಸರ್ಕಾರವಾಗಿರುವುದರಿಂದ ಅದು ಒಳ್ಳೆಯದೋ ಕೆಟ್ಟದ್ದೋ ವಿಶ್ವಾಸ ಇಟ್ಟು ಕೆಲಸ ಮಾಡಬೇಕು. ಅದಕ್ಕೆ ಬೇರೆ ಮಾರ್ಗವಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಆಗಿರುವುದು ಏನೆಂದರೆ ಇವರು ಶಾಸಕರಾಗಿ ಅನೇಕ ಸಲ ಪತ್ರವ್ಯವಹಾರ ಮತ್ತೊಂದು ಮಗದೊಂದು ಮಾಡಿದಾಗಲೂ ಕೂಡ ಅಂತಿಮವಾದ ತೀರ್ಮಾನ ಮಾಡುವುದಕ್ಕೆ ಮುಂಚಿತವಾಗಿ ಸೌಜನ್ಯಕ್ಕಾದರೂ ಒಂದು ಮಾತನ್ನು ಕರೆಸಿ ಹೇಳಿ ಒಂದು ಮೀಟಿಂಗನ್ನು ಮಾಡಿ, ಆಯಿತು ನಿಮ್ಮನ್ನು ಕೇಳಿ ತೀರ್ಮಾನ ಮಾಡುತ್ತೇವೆಂದು ಹೇಳಿದ್ದರೆ ಆಗುತ್ತಿತ್ತು ಇದು ಈಗ ಬಂದಿರುವಂಥ ಪ್ರಶ್ನೆ. ನಾವು ಶಾಸಕರಾಗಿ ನಮಗೆ ಏನು ಗೌರವ ಕೊಡಬೇಕಾಗಿತ್ತು ಆ ಸ್ಥಾನಮಾನಗಳನ್ನು ಮತ್ತು ಮರ್ಯಾದೆಯನ್ನು ನಮಗೆ ಕೊಡಲಿಲ್ಲ ಎನ್ನತಕ್ಕಂಥದ್ದು ಅವರನ್ನು ಭಾವಿಸತಕ್ಕದ್ದು.

ಶ್ರೀ ರಮೇಶ್ ಸಿ. ಜಿಗಜಿಣಗಿ : ಉಪಾಧ್ಯಕ್ಷರೆ, ನಾನು ಎರಡು ಮೂರು ಸಲ ಅದನ್ನೇ ಹೇಳಿದ್ದೇನೆ, ಪುನಃ ಮತ್ತೊಮ್ಮೆ ಹೇಳುತ್ತೇನೆ ನಾನೇ ಜವಾಬ್ದಾರಿ ತೆಗೆದುಕೊಂಡು ಮುಖ್ಯಮಂತ್ರಿಗಳ ಜೊತೆಯಲ್ಲಿ ಒಂದು ಸಭೆಯನ್ನು ಮಾಡಿ ಅದಕ್ಕೆ ಒಂದು ಪರಿಹಾರವನ್ನು ಕಂಡುಹಿಡಿಯೋಣ ಬರೀ ಇಲ್ಲಿಯೇ ಕುಳಿತುಕೊಂಡರೆ ಅದು ಆಗುವುದಿಲ್ಲ.

ಉಪಾಧ್ಯಕ್ಷರು : ಅವರು ಪ್ರತಿಭಟನೆಯನ್ನು ಸಲ್ಲಿಸಬಾರದೆಂದು ಯಾರು ಹೇಳಿದ್ದಾರೆ. ಈಗಾಗಲೇ ಅವರು ಪ್ರತಿಭಟನೆಯನ್ನು ಸಲ್ಲಿಸಿ ಬಿಟ್ಟಿದ್ದಾರೆ. ಅವರು ಮುಖ್ಯಮಂತ್ರಿಗಳ ಹತ್ತಿರ ಕರೆದುಕೊಂಡು ಹೋಗಿ ಅದನ್ನು ಸರಿ ಮಾಡುತ್ತೇವೆಂದು ಹೇಳುತ್ತಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ : ಉಪಾಧ್ಯಕ್ಷರೆ, ಅವರು ಬಸ್ಸುಗಳನ್ನು ನುಡುವುದಕ್ಕೆ ಹೋಗಲಿಲ್ಲ. ಮತ್ತು ಬೇರೆ ಇನ್ನೇನು ಕೆಲಸ ಮಾಡುವುದಕ್ಕೆ ಅವರು ಹೋಗಲಿಲ್ಲ. ಆ ಕಾರಣಕ್ಕಾಗಿ ಅವರನ್ನು ಕರೆಯಲಿಲ್ಲವೆನ್ನುವ ಭಾವನೆ. ಅದು ಸ್ಥಳೀಯವಾಗಿರತಕ್ಕಂಥದ್ದು ಅದು ಸೀಮಿತವಾಗಿರತಕ್ಕಂಥದ್ದು ಆ ಜಿಲ್ಲೆಗೆ ಇರತಕ್ಕಂಥದ್ದು. ಅವರು ಮುಖ್ಯಮಂತ್ರಿಗಳೇ ಬಂದು ಆಶ್ವಾಸನೆ ಕೊಡಲಿ ಎಂದು ಕೇಳುತ್ತಿದ್ದಾರೆ. ಮುಖ್ಯಮಂತ್ರಿಗಳು ಅದೇ ಜಿಲ್ಲೆಯವರು, ಅವರು ಪ್ರತಿಭಟನೆ ಮಾಡತಕ್ಕಂಥ ಸಂದರ್ಭದಲ್ಲಿ ಸೌಜನ್ಯಕ್ಕಾದರೂ ಕರೆದು ಮಾತನಾಡಬಹುದಾಗಿತ್ತು. ಆ ಕೆಲಸವನ್ನು ಅವರು ಮಾಡಲಿಲ್ಲವಲ್ಲಾ? ಅಲ್ಲಿ ಲೋಪ ದೋಷವಾಗಿದೆಯಲ್ಲಾ?

ಶ್ರೀ ರಮೇಶ್ ಸಿ. ಜಿಗಜಿಣಗಿ : ಸರ್ಕಾರದ ಪರವಾಗಿ ಯಾರು ಬೇಕಾದರೂ ಹೇಳಬಹುದು ಮುಖ್ಯಮಂತ್ರಿಗಳು ಹೇಳಬಹುದು ಅಥವಾ ಸಂಬಂಧಪಟ್ಟ ಮಂತ್ರಿಗಳು ಹೇಳಬಹುದು ಲೋಕೋಪಯೋಗಿ ಮಂತ್ರಿಗಳು ಹೇಳಬಹುದು ಯಾರು ಹೇಳಿದರು ಅದು ಸರ್ಕಾರವೆ. ಸರ್ಕಾರದ ಪರವಾಗಿ ನಾವು ಮನವಿ ಮಾಡಿಕೊಂಡಿದ್ದೇವೆ. ನಾವು ಯಾರು ಹೇಳಿದರೂ ಸರ್ಕಾರದ ಪರವಾಗಿ ಹೇಳಬೇಕು. ದಯಮಾಡಿ ಮುಖ್ಯಮಂತ್ರಿಗಳು ಬಂದು ಹೇಳಬೇಕೆಂದು ಹಠ ಮಾಡುವುದು ಬೇಡ. ನಾವು ಎಲ್ಲರೂ ಜವಾಬ್ದಾರಿ ಸ್ಥಾನದಲ್ಲಿ ಇದ್ದುಕೊಂಡು ಈ ಮಾತನ್ನು ಹೇಳುತ್ತಿದ್ದೇವೆ.

ಶ್ರೀ ಡಿ. ನಾರಾಯಣದಾಸ್ : ಮಾನ್ಯ ಉಪಾಧ್ಯಕ್ಷರೆ, ಮುಖ್ಯಮಂತ್ರಿಯವರು ಹೊಸ ಜಿಲ್ಲೆಗಳನ್ನು ಜನವರಿ 26ನೇ ತಾರೀಖು ಘೋಷಣೆ ಮಾಡುತ್ತೇನೆಂದು ಹೇಳಿದಾಗ, ಅವರು ಜನವರಿ 11ನೇ ತಾರೀಖು ಹರಿಹರಕ್ಕೆ ಬಂದಾಗ, ನಾನು ನನ್ನ ಸ್ನೇಹಿತ ಮುಖಂಡರೆಲ್ಲರು ಸೇರಿ, ಮೂರ್ನಾಕುಸಾರಿ ಮುಖ್ಯಮಂತ್ರಿಗಳನ್ನು ಕಂಡು ನಮ್ಮ ಅನಿಸಿಕೆಗಳನ್ನು ಹೇಳಿಕೊಂಡಿದ್ದರು ಸಹ, ಮುಖ್ಯಮಂತ್ರಿಯವರು ನಮ್ಮನ್ನು ಕರೆದು ಚರ್ಚೆ ಮಾಡಿ ಮಾತನಾಡಿಯೇ ತೀರ್ಮಾನ ತೆಗೆದುಕೊಳ್ಳುತ್ತೇನೆಂದು ಹೇಳಿ, ಕೊನೆಗೆ ಅರ್ಬಿಟ್ರರಿಯಾಗಿ ಹೇಗೆ ಜಿಲ್ಲೆಗಳ ಘೋಷಣೆ ಮಾಡಿದರು? ಅವರೇನು ಆಗಸ್ಟ್ 2ರಂದು ಹೊಸ ಜಿಲ್ಲೆಗಳ ಘೋಷಣೆ ಮಾಡಿದರು, ನಾವು 97 ಅಬ್ಜೆಕ್ಷನ್ಸ್‌ಗಳನ್ನು ಡಿ.ಸಿ.ಯವರ ಹತ್ತಿರ ಹಾಕಿದ್ದೇವೆ. ತಾವು ಒಂದಾದರು ಅಬ್ಜೆಕ್ಷನನ್ನು ಕೇಳಿದಿರಾ? ಅದನ್ನೇನಾದರೂ ಗಮನಕ್ಕೆ ತೆಗೆದುಕೊಂಡಿರಾ? ಈ ರೀತಿ ಆರ್ಬಿಟ್ರರಿಯಾಗಿ ಮಾಡುವುದೇನಿತ್ತು? ನಮ್ಮ ಕಡೆ ಬೆಂಕಿ ಹತ್ತಿಕೊಂಡು ಉರಿಯುತ್ತಿದೆ, ಹರಪನಹಳ್ಳಿಯ ಜನರಿಗೆ ನಾನೇನು ಹೇಳಬೇಕು? ಮುಖ್ಯಮಂತ್ರಿಗಳೇ ಬಂದು ಹೇಳಿಕೆಯನ್ನು ಕೊಡಬೇಕು, ಅಲ್ಲಿಯವರೆಗೆ ನಾವು ಧರಣಿಯನ್ನು ಮುಂದುವರೆಸಬೇಕಾಗುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಉಪಾಧ್ಯಕ್ಷರೆ, ಹೊನ್ನಾಳಿ, ಚಿನ್ನಗಿರಿ, ಹರಪನಹಳ್ಳಿ ಸಮಸ್ಯೆಗಳು ನಿನ್ನೆ ಮೊನ್ನೆಯದಲ್ಲ. ಸುಮಾರು ಒಂದು ತಿಂಗಳಿಂದ ಇದರ ಬಗ್ಗೆ ಸಾಕಷ್ಟು ಚಳುವಳಿಗಳಾಗಿದೆ. ವಿಶೇಷವಾಗಿ ಹೊನ್ನಾಳಿಯಲ್ಲಿ ಗ್ರಾಮಪಂಚಾಯಿತಿ ಮಟ್ಟದಲ್ಲಿ ಅಮರಣಾಂತರ ಉಪವಾಸ ಮಾಡುವ ಮಟ್ಟಕ್ಕೆ ಹೋಗಿತ್ತು. ಶಾಂತಿಯಿಂದ ಪ್ರತಿಭಟನೆ ಮಾಡಿದಾಗ ಸರ್ಕಾರ ಅದರ ಬಗ್ಗೆ ಗಮನಕೊಡಲಿಲ್ಲ. ಅನಂತರ ವಿಧಾನಸಭೆಯಲ್ಲಿ ಇದನ್ನು ಪ್ರಸ್ತಾಪ ಮಾಡಿದಾಗ ಮಾನ್ಯ ಮುಖ್ಯಮಂತ್ರಿಯವರೆ ಇದರ ಬಗ್ಗೆ ಪರಿಶೀಲನೆ ಮಾಡುವುದಾಗಿ ಹೇಳಿದ್ದರು. ಆದರೆ ಆ ರೀತಿ ಆಶ್ವಾಸನೆ ಕೊಟ್ಟು ಆಲ್ಲಿ ಹೊಸ

ಜಿಲ್ಲೆಗಳ ಘೋಷಣೆ ಮಾಡಿದರೆಂದರೆ ಇದಕ್ಕಿಂತ ನೋವಿನ ಸಂಗತಿ ಬೇರೆ ಇಲ್ಲ. ನಾವೇ ಹೇಗೆ ಸರ್ಕಾರವನ್ನು ನಂಬಬೇಕು? ಇಲ್ಲಿ ಧರಣಿ ಮಾಡಿದರೆ ಸಭೆಯ ಸಮಯ ವ್ಯರ್ಥವಾಗುತ್ತದೆ, ಅಲ್ಲಿ ಕ್ಷೇತ್ರಕ್ಕೆ ಹೋದರೆ ಶಾಸಕರನ್ನು ಹಿಡಿದು ಜನರು ಒದೆಯುತ್ತಾರೆ. ನಾವು ಸಮಯ ಕಳೆಯಬೇಕೋ ಒದೆ ತಿನ್ನಬೇಕೋ ಹೇಳಿ. ಆದ್ದರಿಂದ ಹೊನ್ನಾಳಿ, ಚೆನ್ನಗಿರಿ, ಹರಪನಹಳ್ಳಿಯನ್ನು ಬಿಟ್ಟು ಜಿಲ್ಲೆಯನ್ನು ಮಾಡುವುದಾಗಿ ಅದರ ಬಗ್ಗೆ ಪರಿಶೀಲನೆ ಮಾಡುವುದಾಗಿ ಸರ್ಕಾರದ ಪರವಾಗಿ ಯಾರಾದರು ಸ್ಪಷ್ಟವಾದ ಹೇಳಿಕೆಯನ್ನು ಕೊಟ್ಟುಬಿಡಲಿ. ಆಗ ನಮಗೆ ಖಂಡಿತ ನಂಬಿಕೆ ಬರುತ್ತದೆ. ಮುಖ್ಯ ಮಂತ್ರಿಗಳು ಬಂದಮೇಲೆ ಯೋಚನೆ ಮಾಡುತ್ತೇವೆ, ಹೇಳುತ್ತೇವೆ ಎಂಬುದು ಸರಿಯಲ್ಲ. ಇಲ್ಲದಿದ್ದರೆ ನಾವು ಕೇಳಿದ್ದನ್ನು ಮಾಡುವುದಿಲ್ಲವೆಂದಾದರು ಹೇಳಿ.

ಶ್ರೀ ಎಸ್.ಎಸ್. ಪಾಟೀಲ್ : ಹಾಗಿದ್ದರೆ ಹೊಸ ಜಿಲ್ಲೆಗಳನ್ನು ಮಾಡುವುದೇ ಬೇಡ ಬಿಡಿ. ಎಲ್ಲೆಲ್ಲಿ ಸಮಸ್ಯೆ ಇದೆ ಅಲ್ಲಿ ಹಾಗೆ ಮಾಡಿಬಿಡುವುದು.

ಶ್ರೀ ಕೆ.ಎಸ್. ಈಶ್ವರಪ್ಪ : ಜವಾಬ್ದಾರಿ ಸ್ಥಾನದಲ್ಲಿರುವ ಸಚಿವರು ಜಿಲ್ಲೆಗಳನ್ನೇ ಮಾಡುವುದು ಬೇಡವೆಂದು ಹೇಳುತ್ತಾರೆ. ಹಾಗಿದ್ದರೆ ಇದನ್ನು ಪರಿಶೀಲನೆ ಮಾಡುತ್ತೇವೆಂದು ಏಕೆ ನಾಟಕದ ಮಾತುಗಳನ್ನು ಹೇಳುತ್ತೀರಿ? ನೀವು ಎಷ್ಟೇ ಹೋರಾಟ ಮಾಡಿ, ಆತ್ಮಹತ್ಯೆ ಮಾಡಿಕೊಳ್ಳಿ, ಚಳುವಳಿ ಮಾಡಿ, ಲಾರಿಗಳನ್ನು, ಬಸ್ಸುಗಳನ್ನು ಸುಡಿ ನಾವು ಮಾಡುವುದಿಲ್ಲವೆಂದಾದರು ಹೇಳಿಬಿಡಿ. ಅಡ್ಡಗೋಡೆಯ ಮೇಲೆ ದೀಪವನ್ನಿಡುವ ಉತ್ತರ ನೀಡಿದರೆ ಸಮಸ್ಯೆ ಬರುತ್ತದೆ. ಅಲ್ಲಿ ಜನರು ಇದನ್ನು ಸರ್ಕಾರ ಮಾಡಬಹುದೆಂದು ತಿಳಿದುಕೊಂಡಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ : ಉಪಾಧ್ಯಕ್ಷರೆ, ಎಲ್ಲರು ಒಕ್ಕೊರಲಿನಿಂದ ಹೊಸ ಜಿಲ್ಲೆಗಳಾಗಬೇಕೆಂದು ಹೇಳಿದ್ದಾರೆ. ದಾವಣಗೆರೆ ಜಿಲ್ಲೆಯಾಗುವುದರಲ್ಲಿ ಯಾರ ವಿರೋಧವೂ ಇಲ್ಲ. ಆದರೆ ಈ ಮೂರೂ ತಾಲ್ಲೂಕುಗಳನ್ನು ಸೇರಿಸಬೇಡವೆಂದರೆ ದಾವಣಗೆರೆ ಜಿಲ್ಲೆಯಾಗುವುದೇ ಬೇಡ. ಅದರ ಅರ್ಥ ಇಷ್ಟೆ. ಇದುವರೆಗೆ ಇಡೀ ರಾಜ್ಯದ ಎಲ್ಲರಿಗೆ ಹೊಸ ಜಿಲ್ಲೆಗಳಾಗಬೇಕಿತ್ತು. ಇನ್ನು ಬೆಳಗಾಂನಲ್ಲಾಗಬೇಕಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ಜಿಲ್ಲೆಗಳ ರೀಆರ್ಗನೈಜೇಷನ್ ಆಗಬೇಕೆಂದು ಸಾಕಷ್ಟು ದಿವಸಗಳಿಂದ ಪ್ರಯತ್ನಗಳು ನಡೆದಿದೆ. ಇದೇನು ಹೊಸದಾಗಿ ಆಗತಕ್ಕದಲ್ಲ. ವಾಸುದೇವ್ ವರದಿ, ಗದ್ದಿಗೌಡರ ಸಮಿತಿ ವರದಿ, ಹುಂಡೇಕಾರ್ ಸಮಿತಿಯ ವರದಿಗಳೆಲ್ಲವು ಜಿಲ್ಲೆಯನ್ನು ರೀಆರ್ಗನೈಸ್ ಮಾಡಬೇಕೆಂದು ಶಿಫಾರಸ್ಸು ಮಾಡಿದ್ದವು. ಅದರ ಜೊತೆಗೆ ಆಡಳಿತಾತ್ಮಕ ಅನುಕೂಲತೆಯನ್ನು ನೋಡಿಕೊಂಡು ಎಲ್ಲೆಲ್ಲಿ ನ್ಯಾಯವಾದ ಬೇಡಿಕೆಗಳಿಗೆ ಅದನ್ನು ಪರಿಗಣಿಸಿ ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮಾಡಬೇಕಾಗಿದ್ದ ಜವಾಬ್ದಾರಿ ಸರ್ಕಾರದ್ದಾಗಿತ್ತು. ಆದರೆ ಶಾಸಕರನ್ನು ಮಾತನಾಡಲು ಕರೆಯುವುದಿಲ್ಲ, ಅವರೊಂದಿಗೆ ಮಾತನಾಡುವುದಿಲ್ಲವೆಂದರೆ ಹೇಗೆ? ಇವರನ್ನು ಕೇಳಿದರೆ ಕೆಲವು ಶಿಫಾರಸ್ಸುಗಳಿಗೆ ಅದರ ಆಧಾರದ ಮೇಲೆ ಮಾಡುತ್ತೇವೆಂದು ಹೇಳುತ್ತಾರೆ. ಆದರೆ ರಾಯಚೂರಿನಲ್ಲಿ ಸಿಂಧನೂರಿಗೆ ಶಿಫಾರಸ್ಸೇ ಇಲ್ಲ, ಯಾರೋ ಎಂ.ಪಿ. ಯವರು ಹೇಳಿದರೆಂದು

ಸಿಂಧನೂರನ್ನು ಸೇರಿಸಿ ನೋಟಿಫಿಕೇಷನ್ ಹೊರಡಿಸುತ್ತೀರಿ. ಒಂದು ಕಡೆ ಶಿಫಾರಸ್ಸು ಇಲ್ಲದೆಯೇ ಮಾಡುವುದು, ಮತ್ತೊಂದು ಕಡೆ ಶಿಫಾರಸ್ಸು ಇದೆಯೆಂದು ತಮಗೆ ಅನುಕೂಲವಿದ್ದಂತೆ ಮಾಡುವುದು. ಮತ್ತೊಂದು ಕಡೆ ಎಲ್ಲಾ ರೀತಿ ಶಿಫಾರಸ್ಸುಗಳಾದರು ಅದನ್ನು ಸೇರಿಸಿರುವುದಿಲ್ಲ, ಏಕೆಂದರೆ ರಾಜಕೀಯ. ಸಿಂಧನೂರು ಇವತ್ತಿನವರೆಗೆ ಅಫೀಶಿಯಲ್ ವರದಿಯನ್ನು ತರಿಸಿಕೊಳ್ಳಿ, ಎಲ್ಲಾ ಸಮಿತಿಯಲ್ಲೂ ಶಿಫಾರಸ್ಸು ಮಾಡಿದ್ದರೆ, ಅದರ ಹೆಸರೇ ಇಲ್ಲ. ಏಕೆಂದರೆ ಅಲ್ಲಿನ ಎಂ.ಎಲ್.ಎ. ಗಳು ಬೇಡವೆಂದು ಹೇಳುತ್ತಾರೆಂದು ಅದನ್ನು ಬಿಡುವುದು. ಅಂದರೆ ಎಲ್ಲೆಲ್ಲಿ ಬೇಕು ಅಲ್ಲಿ ಮಾಡುವುದು ಬೇಡವಾದಲ್ಲಿ ಬಿಡುವುದಾಗಿ ಇದರೆ ವ್ಯತ್ಯಾಸವಾಗುತ್ತದೆ, ವಿರೋಧ ವ್ಯಕ್ತವಾಗುತ್ತದೆ. ಮೊನ್ನೆ ಸಹ ಕೃಷ್ಣಮೂರ್ತಿಯವರು ನ್ನು ವಿರೋಧ ಮಾಡುತ್ತಿದ್ದಾರೆಂದು ಅವರನ್ನು ಒಳಕ್ಕೆ ಹಾಕಿರುವುದು ಸರಿಯಲ್ಲವೆಂದು ನಾನು ದ್ದೆ. ಮುಖ್ಯಮಂತ್ರಿಯವರು ಬಸ್ಸಿಗೆ ಕಲ್ಲನ್ನು ಹೊಡೆದರೆ ಏನು ಮಾಡಬೇಕೆಂದು ಪ್ರಸ್ತಾಪ ಸುತ್ತಿದ್ದರು. ಅವರನ್ನು ಕಲ್ಲು ಹೊಡೆದರೆಂದು ಒಳಕ್ಕೆ ಹಾಕಿದ್ದೀರಿ, ತಾವು ಇಂದಿರಾಗಾಂಧಿಯವರು ಲ್ಲಿ ಹೋಗಬೇಕಾದರೆ ಬಾಂಬೇ ಇಟ್ಟಿದ್ದರು ಅದಕ್ಕೇನು ಮಾಡಬೇಕೆಂದು ಕೇಳಿದೆ, ಅದಕ್ಕೆ ಏನು ಮಾತನಾಡದೆ ಪ್ರಜಾಪ್ರಭುತ್ವದ ಉಳಿವಿಗಾಗಿ ಬಾಂಬ್‌ನ್ನು ಇಟ್ಟರಂತೆ, ಎಂದು ಹೇಳುತ್ತಾರೆ ಇವತ್ತು ಅಲ್ಲಿ ಉರಿಯುತ್ತಿದೆ, ಸಂಬಂಧಪಟ್ಟ ಶಾಸಕರನ್ನು ಕರೆದು ತಾವು ಮಾತನಾಡಬೇಕು. ದರೆ ಜನರೂ ಸಹ ಸುಮ್ಮನೆ ಇರುವುದಿಲ್ಲ. ನಮಗೆ ಅನ್ಯಾಯವಾಗಿದೆ ನೀವೇನು ಮಾಡುತ್ತೀರೆಂದು ರನ್ನು ಕೇಳುತ್ತಾರೆ. ಹರಪನಹಳ್ಳಿ, ಜಗಳೂರು, ಹೊನ್ನಾಳಿಯವರಿದ್ದಾರೆ. ಆದ್ದರಿಂದ ಮುಖ್ಯಮಂತ್ರಿಯವರನ್ನೇ ಕರೆಸಿ ಹೇಳಿಬಿಡಿ. ಅವರದ್ದೇ ಜಿಲ್ಲೆಯದ್ದಾಗಿದೆ. ರಾಯಚೂರಿನ ಬಗ್ಗೆ ಚೂರು ಶಾಸಕರು ಮುಖ್ಯಮಂತ್ರಿಯವರನ್ನು ಭೇಟಿ ಮಾಡಿರಬಹುದು. ಆದ್ದರಿಂದ ಮೂರ್ನಾಕು ಸಮಸ್ಯೆ ಇದೆ, ಆದ್ದರಿಂದ ಮುಖ್ಯಮಂತ್ರಿಯವರೆ ಬಂದು ಉತ್ತರವನ್ನು ಹೇಳಿದರೆ ಒಳ್ಳೆಯದು. ಮಾತಿಗೆ ಇವರು ಬೆಲೆ ಕೊಡುತ್ತಾರೆ.

ಉಪಾಧ್ಯಕ್ಷರು : ನೀವೆಲ್ಲರು ಹೇಳಿದಮೇಲೆ ಕಂದಾಯ ಸಚಿವರು ಮುಖ್ಯಮಂತ್ರಿಯವರ ಅವರನ್ನು ಭೇಟಿ ಮಾಡಿಸುವುದಾಗಿ ಜವಾಬ್ದಾರಿಯನ್ನು ತೆಗೆದುಕೊಂಡಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕಂದಾಯ ಸಚಿವರು ಪ್ರಯತ್ನ ಮಾಡುತ್ತಾರೆ, ಅವರ ಗೆ ಬೆಲೆ ಸಿಗಬೇಕಲ್ಲ, ಅವರ ಪ್ರಯತ್ನ ಯಶಸ್ವಿಯಾಗಬೇಕಲ್ಲ.

ಉಪಾಧ್ಯಕ್ಷರು : ಪ್ರಯತ್ನ ಮಾಡದೆ ಯಶಸ್ವಿ ಸಿಗುವುದಿಲ್ಲವೆಂದರೆ ಹೇಗೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ಈ ರೀತಿಯಾಗಿದೆ. ಸಿಂಧನೂರಿಗೆ ಹಾಗಾಗಿದೆ. ವ್ಯತ್ಯಾಸಗಳು ಆಗುತ್ತಿರುತ್ತದೆ. ತಮ್ಮ ತೊಂದರೆಯೂ ನಮಗೆ ಗೊತ್ತಿದೆ ನೀವು ಹೇಳಿದ್ದನ್ನೆಲ್ಲ ರೆಂದಿಲ್ಲ.

ಶ್ರೀ ರಮೇಶ್ ಸಿ. ಜಿಗಜಿಣಗಿ : ನಾನು ಅವರಲ್ಲಿ ಮನವಿ ಮಾಡಿಕೊಂಡಿದ್ದೇನೆ. ಅವರು ಸಭೆ ಲ್ಲವೆಂದು ಪದೇ ಪದೆ ಹೇಳುತ್ತಿದ್ದಾರೆ. ಆದ್ದರಿಂದ ಇವರೆಲ್ಲರನ್ನು ಕರೆದುಕೊಂಡು ಹೋಗಿ

ಉಪಾಧ್ಯಕ್ಷರು : ತಾವು ಇಂದಿನ ಪತ್ರಿಕೆಯನ್ನು ನೋಡಿರಬೇಕು. ನರಗುಂದದಲ್ಲಿ ಮುಷ್ಕರ ಮಾಡಿದ್ದಾರೆ. ಹನ್ನೆರಡು ದಿವಸಗಳಾಗಿದೆ. ಧಾರವಾಡ ಜಿಲ್ಲೆಯ ನರಗುಂದದಲ್ಲಿ ಸಹ ಇದೆ ಪರಿಸ್ಥಿತಿ ಇದೆ. ಇಲ್ಲಿ ಅಂಗಡಿಗಳು, ಶಾಲಾಕಾಲೇಜುಗಳು ಬಂದ್ ಆಗಿದೆ. ನಿನ್ನೆ ಲೋಕಸಭಾ ಎಂ.ಪಿ. ರವರ ಸ್ಟೈಕ್ ಮಾಡಿದ್ದಾರೆ. ಆದ್ದರಿಂದ ಇವೆಲ್ಲದರ ಪರವಾಗಿ ಸರ್ಕಾರ ನಿರ್ಣಯವೊಂದನ್ನು ತೆಗೆದುಕೊಂಡರೆ ಒಳ್ಳೆಯದು.

ಶ್ರೀ ಎಸ್.ಎಸ್. ಪಾಟೀಲ್ : ಇಲ್ಲಿ ನರಗುಂದದ ಪ್ರಶ್ನೆ ಬಂದಿಲ್ಲ. ಅಲ್ಲಿ ಸತ್ಯಾಗ್ರಹವಾಗಿರುವುದ ನಮ್ಮ ಗಮನಕ್ಕೆ ಬಂದಿದೆ. ಬಂದ್ ಆಗಿರುವುದು ತಿಳಿದಿದೆ. ಇವರೆಲ್ಲರೂ ಈ ರೀತಿ ಮಾಡುವುದನ್ನ ನೋಡಿದರೆ ಜಿಲ್ಲಾ ವಿಂಗಡಣೆ ಮಾಡುವುದು ಬೇಡವೆಂದು ವಿಧಾನಸಭೆಯಲ್ಲಿ ಮುಖ್ಯಮಂತ್ರಿಯವರ ನಿರ್ಣಯ ತೆಗೆದುಕೊಳ್ಳುವುದು ಒಳ್ಳೆಯದೆಂದು ಕಾಣುತ್ತದೆ. ಇಂಥ ಜಿಲ್ಲಾ ವಿಂಗಡಣೆಯ ಬ ನಿರ್ಣಯ ತೆಗೆದುಕೊಂಡಮೇಲೆ ಎಲ್ಲಾ ಜನರ ಬೆಂಬಲ ಅದಕ್ಕಿದೆ, ಕೆಲವರು ವಿರೋಧ ಮಾಡುವುದ ಸಹಜ. ಆದರೆ ಇದು ಒಳ್ಳೆಯ ನಿರ್ಣಯವಾಗಿರುವುದರಿಂದ ದಯವಿಟ್ಟು ಎಲ್ಲರೂ ಸಹಕಾ ಮಾಡಬೇಕು. ಮುಖ್ಯಮಂತ್ರಿಯವರ ಜೊತೆ ಮಾತನಾಡಲು ತಯಾರಾಗಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮುಖ್ಯಮಂತ್ರಿಯವರು ಇಲ್ಲಿಗೆ ಬರೇ ತೊಂದರೆಯೇನಾಗಿದೆ? ಅವರು ಬಂದು ಸ್ಟೇಟ್‌ಮೆಂಟ್ ಕೊಡಲು ತೊಂದರೆಯೇನು?

ಶ್ರೀ ಎಸ್.ಎಸ್ ಪಾಟೀಲ್ : ನೋಡಿ ಖರ್ಗೆಯವರೇ, ಇಲ್ಲಿ ಮುಖ್ಯ ಮಂತ್ರಿಗಳು ನಿರ್ಣಯ ಹೇಳಲು ಆಗುವುದಿಲ್ಲವಾದ ಕಾರಣ, ಅವರನ್ನು ಕರೆದು ಮಾತನಾಡಿ, ಅವರ ಜೊತೆ ಚರ್ಚೆ ಮಾಡಿಸುತ್ತೇನೆ, ಭೇಟಿ ಮಾಡಿಸುತ್ತೇನೆ ಎಂದು ಕಂದಾಯ ಸಚಿವರು ಹೇಳಿದ್ದಾರೆ. ಅವರು ಮೂವರ ಭೇಟಿಯಾಗಿ ಅವರವರು ಪರಸ್ಪರ ಮಾತ್ಕನಾಡಿದರೆ ಅದರ ತಿರುಳು ಬರುತ್ತದೆ. ಅದು ಬಿಟ್ಟು ಜಿಲ್ಲೆಯ ಬೇಡ, ತೆಗೆದು ಬಿಡುತ್ತೇವೆ ಎಂದು ಹೇಳಲು ಬರುತ್ತದೆಯೇ? ಹಾಗೆ ಹೇಳಲು ಬರುವುದಿ ಅದಕ್ಕೆ ಅವರು ಮಾತನಾಡಲಿ.

ಶ್ರೀ ಕಾಗೋಡು ತಿಮ್ಮಪ್ಪ : ಸ್ವಾಮಿ, ಸ್ಥಿತಿ ಯಾವ ಮಟ್ಟಕ್ಕೆ ಬಂದಿದೆ ಎಂದು ಆಗ ಈಶ್ವರಪ್ಪನವರು ಹೇಳಿದರು. ಈಗ ಆಯಾ ಕ್ಷೇತ್ರದಲ್ಲಿ ಹೋರಾಟ ಪ್ರಾರಂಭವಾಗಿ ಹೋಗಿ ಇದಕ್ಕೆ ಅವರು ಕ್ಷೇತ್ರ ಮಟ್ಟದಲ್ಲಿ ಯಾವ ಸ್ವರೂಪದ ಹೋರಾಟವನ್ನು ಮಾಡಬೇಕಿತ್ತೋ ಪ್ರಮಾಣದಲ್ಲಿ ಜನರ ಜೊತೆಯಲ್ಲಿ ಮಾಡಿಯಾಗಿದೆ, ಪಕ್ಷಾತೀತವಾಗಿ ಕೂಡ ಇದು ನಡೆದಿ ಇವತ್ತು ಶಾಸಕರು ಈ ಶಾಸನ ಸಭೆಯಲ್ಲಿ ಅಷ್ಟೇ ಪ್ರಮಾಣದ ಹೋರಾಟವನ್ನು ಮಾಡದೇ ಹೋದ ನಾಳೆ ಕ್ಷೇತ್ರದಲ್ಲಿ ಜನರಿಗೆ ಏನು ಉತ್ತರ ಹೇಳ ಬೇಕಾಗುತ್ತದೆ. ಆದ್ದರಿಂದ ಹೋರಾಟ ಮಾಡ ಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮುಂಡರಗಿ ನಮ್ಮ ಕೊಪ್ಪಳಕ್ಕೆ ಬಂದಿದ್ದರೆ, ನೀ ಮಾಡುತ್ತಿದ್ದಿರಿ. ಆ ಕಡೆ ಇದ್ದೇವೆ ಎಂದು ಸುಮ್ಮನಿದ್ದೀರಿ.

ಶ್ರೀ ಎಸ್.ಎಸ್. ಪಾಟೀಲ್ : ಒಂದು ವೇಳೆ ಹಾಗಿದ್ದು, ಜನರ ಬಲ ಇದ್ದರೆ ಅದನ್ನೂ ಮಾಡಬೇಕು.

ಉಪಾಧ್ಯಕ್ಷರು : ಮುಂಡರಗಿ ಕೊಪ್ಪಳಕ್ಕೇ ಹೋಗಬೇಕು ಎನ್ನುವವರು ಅವರು. ಅವರ ಮನಸ್ಸಿನಲ್ಲಿ ಹಾಗೇ ಇದೆ.

ಶ್ರೀ ಎಸ್.ಎಸ್. ಪಾಟೀಲ್ : ಲೋಕಸಭಾ ಸದಸ್ಯರು ನಮ್ಮನ್ನು ಕೊಪ್ಪಳಕ್ಕೇ ಸೇರಿಸಿದ್ದಾರೆ.

ಶ್ರೀ ಎಸ್.ಆರ್. ಲಕ್ಷ್ಮಯ್ಯ : ಮಾನ್ಯ ಉಪಾಧ್ಯಕ್ಷರೇ, ಜನರೆಲ್ಲಾ ಒಂದು ಕೆರೆ ಮಾಡಬೇಕು ಎಂದು ಒಂದು ಅಭಿಪ್ರಾಯಪಡುತ್ತಾರೆ. ಅದಕ್ಕೆ ಸರ್ಕಾರ ಆದೇಶ ಕೊಡುತ್ತದೆ. ಒಂದು ಏರಿಯಾ ತೆಗೆದುಕೊಂಡು ಕೆರೆಯನ್ನು ಕಟ್ಟಬೇಕಾದರೆ ಸಾವಿರ ಜನಗಳಿಗೆ ಅನುಕೂಲವಾಗುತ್ತದೆ, ನೂರು ಮನೆಗಳು ಮುಳುಗುತ್ತವೆ, ನೂರು ಮನೆಯವರು ಬಯ್ಯುತ್ತಾರೆ, ಸಾವಿರ ಜನ ಹೊಗಳುತ್ತಾರೆ. ಹಾಗೆ ಆಗುತ್ತದೆ. ಆದ್ದರಿಂದ ಹೀಗೇ ಮಾಡಬೇಕು ಎಂದರೆ ಸರ್ಕಾರ ಮಾಡಲು ಆಗುವುದಿಲ್ಲ.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಉಪಾಧ್ಯಕ್ಷರೇ, ಈಗ ಕಂದಾಯ ಮಂತ್ರಿಗಳೂ ಕೂಡ, ಪುನಃ ಒಂದು ಸಭೆಯನ್ನು ಮುಖ್ಯ ಮಂತ್ರಿಗಳ ಜೊತೆ ಮಾಡುತ್ತೇನೆ ಎಂದು ಹೇಳಿದ್ದಾರೆ. ಇದನ್ನು ಚರ್ಚೆಯ ಮುಖಾಂತರ ನಾವು ಬಗೆಹರಿಸಬೇಕಾಗುತ್ತದೆ. ಎಲ್ಲಾದರೂ ಚಿಕ್ಕಚಿಕ್ಕ ಭಿನ್ನಾಭಿಪ್ರಾಯಗಳಿದ್ದರೆ, ಅದನ್ನು ಬಗೆಹರಿಸಬೇಕಾಗುತ್ತದೆ. ಜಿಲ್ಲೆಗಳು ಆಗಬೇಕು ಎನ್ನುವುದು ಎಲ್ಲರ ಒಂದು ಅಭಿಮತ, ಆ ಪ್ರಕಾರ ಜಿಲ್ಲೆಯಾಗಿದೆ. ಇನ್ನು ತಾಲ್ಲೂಕು ಒಳಗಡೆ ಸ್ವಲ್ಪ ಆ ಕಡೆ ಈ ಕಡೆ ಮಾಡಿಕೊಂಡಿರತಕ್ಕಂಥಾದ್ದರ ಬಗ್ಗೆ ಭಿನ್ನಾಭಿಪ್ರಾಯ ಬಂದಿದೆ, ಸದನದಲ್ಲಿ ಧರಣಿ ಕುಳಿತರೆ ನಾವು ಇದನ್ನು ಪರಿಹಾರ ಮಾಡಲು ಆಗುವುದಿಲ್ಲ. ಆದ್ದರಿಂದ ಪುನಃ ಒಂದು ಸಭೆ ಕರೆಯುತ್ತೇವೆ. ಮುಖ್ಯ ಮಂತ್ರಿಗಳನ್ನು ಕರೆಯುತ್ತೇವೆ ಕುಳಿತು ನಾವು ಮಾತುಕತೆ ಮಾಡೋಣ ಎಂದು ಕಂದಾಯ ಮಂತ್ರಿಗಳು ಹೇಳಿದ್ದಾರೆ. ಬಹುಶಃ ಆ ಸಂದರ್ಭದಲ್ಲಿ ತೆಗೆದುಕೊಂಡಿರತಕ್ಕಂಥ ತೀರ್ಮಾನ ಅವರ ಮನಸ್ಸಿಗೆ ಸರಿ ಎಂದು ಕೂಡಲೇ ಅವರು ಅದನ್ನು ಹೇಳಬೇಕಾಗುತ್ತದೆ. ಪರಿಸ್ಥಿತಿಯ ಅರಿವನ್ನೂ ಅವರಿಗೆ ನೀಡಬೇಕಾಗುತ್ತದೆ. ಅವರು ಈ ವಿಷಯವನ್ನು ಸರ್ಕಾರಕ್ಕೆ ತಿಳಿಸಬೇಕಾಗುತ್ತದೆ. ಆದ್ದರಿಂದ ಒಂದು ಸಭೆಯನ್ನು ಪುನಃ ಕರೆಯುತ್ತೇವೆ ಎಂದು ಹೇಳಿದ್ದಾರೆ. ಮಾನ್ಯ ಮಿತ್ರರಾಗಿರತಕ್ಕಂಥ ನಾರಾಯಣದಾಸ್ ಮತ್ತು ಇತರ ಮಿತ್ರರಿಗೆ ಹೇಳುತ್ತೇನೆ, ದಯವಿಟ್ಟು ಧರಣಿಯಿಂದ ಹೊರಗೆ ಬನ್ನಿ. ಕಂದಾಯ ಮಂತ್ರಿಗಳು ಹೇಳಿದ್ದಾರೆ. ಇದು ಅವರ ಇಲಾಖೆಗೆ ನೇರವಾಗಿ ಸಂಬಂಧಿಸಿರತಕ್ಕಂಥಾದ್ದು. ಮುಖ್ಯ-ಮಂತ್ರಿಗಳ ಜೊತೆಯಲ್ಲಿ ಪುನಃ ಒಂದು ಸಭೆಯನ್ನು ಕರೆದು ನಾವು ಇವತ್ತೋ, ನಾಳೆಯೋ, ನಾಡಿದ್ದೋ ಪುನಃ ಒಂದು ಚರ್ಚೆಯನ್ನು ಮಾಡೋಣ, ಏನು ಅಭಿಪ್ರಾಯ ಮೂಡಿ ಬರುತ್ತದೆ ಎನ್ನುವುದನ್ನು ವಿಚಾರ ಮಾಡೋಣ. ಆದ್ದರಿಂದ ದಯವಿಟ್ಟು ತಾವು ಧರಣಿಯಿಂದ ಹೊರಗೆ ಬನ್ನಿ. ಪುನಃ ಒಂದು ಉತ್ತಮವಾಗಿರತಕ್ಕಂಥ ಚರ್ಚೆಯನ್ನು ಮಾಡೋಣ. ನಾನು ಇದನ್ನು ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ. ಕಂದಾಯ ಮಂತ್ರಿಗಳೂ ಇರುತ್ತಾರೆ. ಆದ್ದರಿಂದ ನಾಳೆಯೋ, ನಾಡಿದ್ದೋ, ಯಾವಾಗಲೋ ಒಂದು ಚರ್ಚೆಯನ್ನು ಮಾಡೋಣ. ನಾವು ಈ ತಿಂಗಳ ಅಂತ್ಯದವರೆಗೆ ಈ ಸದನದಲ್ಲಿ ಕೂಡುವವರಿದ್ದೇವೆ. ಅಷ್ಟರಲ್ಲಿ ಪುನಃ ಏನಾದರೊಂದು

ಚರ್ಚೆ ಮಾಡಲು ನಮಗೆ ಅವಕಾಶ ಮಾಡಿಕೊಡಿ. ತಾವು ದಯವಿಟ್ಟು ಧರಣಿಯಿಂದ ಹೊರಬ
ಎಂದು ನಿಮ್ಮನ್ನು ಸರ್ಕಾರದ ವತಿಯಿಂದ ಕೇಳಿಕೊಳ್ಳುತ್ತಿದ್ದೇನೆ. ನಾವು ಮುಕ್ತವಾಗಿ ಚರ್ಚೆಯ
ಮಾಡೋಣ. ತಮಗೆ ಬಾಗಿಲು ತೆರೆದು ಇದೆ. ತಾವು ದಯವಿಟ್ಟು ಇದರ ಆಸ್ಪದವನ್ನು ಉಳಿಸಿಕೊಳ್ಳಬೇ
ಎಂದು ನಾನು ಹೇಳುತ್ತೇನೆ. ಎಲ್ಲೋ ಒಂದು ಕಡೆ ಚರ್ಚೆ ಮಾಡಿದ ಮೇಲೆ ಅಲ್ಲಿ ಯಾವುದಾದರ
ಒಂದು ತೀರ್ಮಾನಕ್ಕೆ ಬಂದರೆ, ಆ ತೀರ್ಮಾನವನ್ನು ಜಾರಿಗೆ ತರುವಂಥ ಅವಕಾಶ ಯಾವಾಗಲ
ಇದೆ. ಪುನಃ ಅದನ್ನು ಚರ್ಚೆ ಮಾಡೋಣ. ಧರಣಿ ಕುಳಿತು ಸದನದ ಸಮಯವನ್ನು ನಾವು ಈ ರೀ
ವ್ಯರ್ಥ ಮಾಡುವುದು ಸರಿಯಲ್ಲ. ನಾವು ಈಗ ಬೇಡಿಕೆಗಳ ಮೇಲೆ ಚರ್ಚೆಯನ್ನು ಪ್ರಾರಂ
ಮಾಡಬೇಕಾಗುತ್ತದೆ. ಆದ್ದರಿಂದ ಹೇಳುತ್ತಿದ್ದೇನೆ, ಮುಖ್ಯಮಂತ್ರಿಗಳ ಜೊತೆ ಪುನಃ ಒಂದು ಬಾ
ಚರ್ಚೆಯನ್ನು ಮಾಡಿ ಅದರಿಂದ ಏನು ತೀರ್ಮಾನ ಬರುತ್ತದೆ ಎಂದು ನೋಡೋಣ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಉಪಾಧ್ಯಕ್ಷರೇ, ನರಗುಂದ ತಾಲ್ಲೂಕಿನ ಜನರು ಡೆಲಿಗೇಷನ್
ಬಂದಾಗ ನಾನೂ ಮುಖ್ಯಮಂತ್ರಿಗಳ ಹತ್ತಿರ ನಿಯೋಗದಲ್ಲಿ ಹೋಗಿದ್ದೆ. ಆಗ ಮುಖ್ಯಮಂತ್ರಿಗಳ
ಈಗ ಗಡಿಬಿಡಿ ಮಾಡಬೇಡಿ, ನವೆಂಬರ್ ತಿಂಗಳಲ್ಲಿ ನಾವು ಗದಗ್ ಜಿಲ್ಲೆಯನ್ನು ಘೋಷಣೆ
ಮಾಡುತ್ತೇವೆ, ಈಗ ಸದ್ಯಕ್ಕೆ ನೀವು ಸುಮ್ಮನೆ ಇರಿ, ನಾವು ಪುನರ್ ಪರಿಶೀಲನೆ ಮಾಡುತ್ತೇ
ಎಂದು ಹೇಳಿದ್ದರು. ಆದರೆ ಈ ತಕ್ಷಣವೇ 23ನೇ ತಾರೀಖಿನ ದಿನ ಹೊಸ ಜಿಲ್ಲೆಗಳನ್ನು ಉದ್ಘಾಟ
ಮಾಡುವುದಾಗಿ ಘೋಷಣೆ ಮಾಡಿಬಿಟ್ಟರು. ಹಾಗಾಗಿ ಇವತ್ತು ನರಗುಂದದಲ್ಲಿ ಶಾಂತವಾಗಿದ್ದಂ
ಹೋರಾಟ, ಈಗ ಗಂಭೀರವಾಗಿ ನಡೆಯುತ್ತಿದೆ. ಒಂದು ವಾರದಿಂದ ಸತತವಾಗಿ ಅಲ್ಲಿ ಬಂದ
ಆಗಿದೆ, ವ್ಯಾಪಾರ ಬಂದ್ ಆಗಿದೆ, ಸ್ಕೂಲುಗಳು ಬಂದ್ ಆಗಿವೆ, ಎಲ್ಲವೂ ಬಂದ್ ಆಗಿದೆ.

ಉಪಾಧ್ಯಕ್ಷರು : ತಾವು ಏನು ಅಭಿಪ್ರಾಯ ವ್ಯಕ್ತ ಮಾಡಿದ್ದೀರಿ ಅದನ್ನು ನಾನು ಈಗಾಗಲೆ
ಹೇಳಿದ್ದೇನೆ. ಈಗ ನರಗುಂದದಲ್ಲಿ ಏನಾಗಿದೆ ಎಂದು ನಾನು ಹೇಳಿದ್ದೇನೆ. ಈಗಾಗಲೇ ಲೋಕಸಭ
ಸದಸ್ಯರು ಅಲ್ಲಿ ಹೋಗಿ ಸ್ಟೈಕ್ ಮಾಡುತ್ತಿದ್ದಾರೆ. ಈ ಪ್ರಶ್ನೆ ಬಂದ ಹಾಗೆಯೂ ಅದು ಬರುತ್ತದ
ಅದಕ್ಕಾಗಿ ಸರ್ಕಾರದ ಮಟ್ಟದಲ್ಲಿ ನಿರ್ಣಯ ಮಾಡಿ ಎನ್ನುವ ಮಾತನ್ನು ನಾನು ಹೇಳಿದ್ದೇನೆ.

ಶ್ರೀ ಡಿ. ನಾರಾಯಣದಾಸ್: ಈಗಾಗಲೇ 2-8-97ರ ನೋಟಿಫಿಕೇಷನ್ ಪ್ರಕಾರ ಈ
ತಾಲ್ಲೂಕುಗಳನ್ನು ದಾವಣಗೆರೆಗೆ ಸೇರಿಸಿದ್ದಾರೆ. ಮಾತುಕತೆಗೆ ಏನೂ ಉಳಿದಿಲ್ಲ. ಮುಖ್ಯ ಮಂತ್ರಿಗಳ
ಬಂದು ನೋಟಿಫಿಕೇಷನ್ ಬದಲಿ ಮಾಡುತ್ತೇನೆ, ಹರಪನಹಳ್ಳಿಯನ್ನು ಬಳ್ಳಾರಿಯಲ್ಲೇ ಉಳಿಸುತ್ತೇವ
ಎಂದು ಹೇಳಿದರೆ ಮಾತ್ರ ನಾವು ಧರಣಿಯನ್ನು ವಾಪಸ್ಸು ತೆಗೆದುಕೊಳ್ಳುತ್ತೇವೆ.

ಉಪಾಧ್ಯಕ್ಷರು : ಜಿಲ್ಲಾ ಸಚಿವರಾದ ಪ್ರಕಾಶ್‌ರವರು ಏನು ಮಾತನಾಡುತ್ತಾರೆ ನೋಡೋಣ

ಶ್ರೀ ಎಂ.ಪಿ. ಪ್ರಕಾಶ್: ಸನ್ಮಾನ್ಯ ಉಪಾಧ್ಯಕ್ಷರೇ, ಅವರ ಬೇಡಿಕೆಗಳು ಎಷ್ಟೇ ತೀವ್ರವಾಗಿದ್ದರೂ
ಕೂಡ, ಮಾತುಕತೆಗೆ ಆಹ್ವಾನ ಮಾಡುತ್ತೇವೆ ಎಂದು ಕಂದಾಯ ಸಚಿವರು ಮತ್ತು ಮಾನ್ಯ ಸಂಸದೀಯ
ಸಚಿವರು ಹೇಳಿದ ಮೇಲೆ ಮಾತುಕತೆಯಲ್ಲಿ ನೀವು ಅವರನ್ನು ಒಪ್ಪಿಸಬಹುದು. ಮಾತುಕತೆಗ
ಕರೆಯುವಂಥ ಉದ್ದೇಶವಾದರೂ ಏನು ಎಂದರೆ, ಅಲ್ಲಿ ಅವರು ನಿಮ್ಮನ್ನು ಒಪ್ಪಿಸಬಹುದು ಅಥವಾ

ನೀವು ಅವರನ್ನು ಒಪ್ಪಿಸಬಹುದು. ಆ ರೀತಿ ಆಗುವಂಥಾದ್ದು ಇದೆ. ನಾನು ಹೇಳುತ್ತೇನೆ, ಮಾನ್ಯ ರಾಮದಾಸ್‌ರವರೇ ಒಂದು ಮಾತು, ಯಾವುದೇ ನೋಟಿಫಿಕೇಷನ್‌ಅನ್ನು ಸರ್ಕಾರ ಬದಲಾವಣೆ ಮಾಡಬಾರದು ಎಂದೇನೂ ಇಲ್ಲ. ಯಾವುದಾದರೂ ಕೂಡ ಸರ್ಕಾರಕ್ಕೆ ಅಂತರ್ಗತವಾದಂಥ ಹಕ್ಕು ಇದೆ. ಅದನ್ನು ಬದಲಾವಣೆ ಮಾಡತಕ್ಕಂಥ ಹಕ್ಕು ಇದೆ. ಈಗ ಒಂದು ನಿರ್ಧಾರವನ್ನು ಮುಖ್ಯ ಮಂತ್ರಿಗಳು ತೆಗೆದು ಕೊಂಡಿರತಕ್ಕಂಥ ಸಂದರ್ಭದಲ್ಲಿ, ಕಂದಾಯ ಮಂತ್ರಿಗಳು ನಿಮ್ಮೆಲ್ಲರನ್ನೂ ಕರೆದುಕೊಂಡು ಹೋಗಿ ಮಾತನಾಡುತ್ತೇನೆ ಎಂದು ಹೇಳಿದ್ದಾರೆ. ಮಾತುಕತೆ ಮೂಲಕ ಬಗೆಹರಿಸುವಂಥ ಪ್ರಯತ್ನವನ್ನೂ ಕೂಡ ನಾನು ಮಾಡುತ್ತೇನೆ ಎನ್ನುವಂಥ ಮಾತನ್ನೂ ಕೂಡ ಮಾನ್ಯ ಮಂತ್ರಿಗಳು ಹೇಳಿದ್ದಾರೆ. ನೀವು ಸಕಾರಣವಾಗಿರತಕ್ಕಂಥ ವಿಚಾರಗಳನ್ನು ಅಲ್ಲಿ ಪ್ರಸ್ತಾಪ ಮಾಡಿದಾಗ ಪ್ರಾಯಶಃ ಮುಖ್ಯ-ಮಂತ್ರಿಗಳು ಮನಸ್ಸನ್ನು ಬದಲಿಸಬಹುದು. ಆ ಸಂದರ್ಭದಲ್ಲಿ ಅಧಿಸೂಚನೆಯನ್ನು ಬದಲು ಮಾಡಲೂ ಕೂಡ ಸಾಧ್ಯತೆ ಇದೆ. ಈಗ ತಾವು ಸದನದ ಗಮನವನ್ನು ಸೆಳೆದಿದ್ದೀರಿ. ಸದನದ ಮೂಲಕವಾಗಿ ಇಡೀ ರಾಜ್ಯದ ಗಮನವನ್ನು ಸೆಳೆದಿದ್ದೀರಿ. ನಿಮ್ಮ ಈ ಒಂದು ಪ್ರಯತ್ನ ಯಶಸ್ವಿಯಾಗಿದೆ. ಮಾತುಕತೆಗೆ ಬಂದು ಆ ವಿಚಾರವನ್ನು ಚರ್ಚೆ ಮಾಡಿ. ಈ ವಿಚಾರವನ್ನು ಬಗೆಹರಿಸಲು ಸಾಧ್ಯತೆ ಇರುವುದರಿಂದ ದಯವಿಟ್ಟು ನಿಮ್ಮಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ಮುಖ್ಯ ಮಂತ್ರಿಗಳ ಜೊತೆ ಮಾತನಾಡಿ. ಮಾತನಾಡಿದ ಮೇಲೆ ಯಾವುದಾದರೂ ಒಂದು ಒಳ್ಳೆಯ ಅಭಿಪ್ರಾಯಕ್ಕೆ ಬರುವ ಸಾಧ್ಯತೆ ಇದೆ. ಈ ಧರಣಿಯಿಂದ ಸಮಸ್ಯೆಯನ್ನು ಬಗೆಹರಿಸಲು ಆಗುವುದಿಲ್ಲ. ಮಾತುಕತೆಗೆ ಕಂದಾಯ ಮಂತ್ರಿಗಳು ಏನು ಆಹ್ವಾನ ಕೊಟ್ಟಿದ್ದಾರೆ, ಅದನ್ನು ಒಪ್ಪಿಕೊಂಡು ತಾವು ದಯವಿಟ್ಟು ಸದನದ ಕಾರ್ಯಕಲಾಪಗಳಿಗೆ ಸಹಕರಿಸಬೇಕು ಎಂದು ವಿನಂತಿ ಮಾಡುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಉಪಾಧ್ಯಕ್ಷರೇ, ಇದನ್ನು ಹೀಗೂ ಮಾಡಬಹುದು ಎಂದು ಕಾಣುತ್ತದೆ. ವಿರೋಧ ಪಕ್ಷದ ನಾಯಕರೂ ಇಲ್ಲಿ ಇದ್ದಾರೆ. ಸಂಬಂಧಪಟ್ಟ ಮಂತ್ರಿಗಳು ಮುಖ್ಯ ಮಂತ್ರಿಗಳ ಜೊತೆ ಮಾತನಾಡುತ್ತೇನೆ ಎಂದು ಹೇಳಿದ್ದಾರೆ. ಆದ್ದರಿಂದ ನಾಳೆ ಒಂದು ದಿವಸ ಸಮಯ ಕೊಟ್ಟು ನಾಡಿದ್ದರೊಳಗೆ ಮಾತುಕತೆ ಮಾಡಿ ವಾದವನ್ನು ಬಗೆಹರಿಸುತ್ತೇವೆ ಎಂದು ಸರ್ಕಾರ ಆಶ್ವಾಸನೆ ಕೊಟ್ಟರೆ ಒಳ್ಳೆಯದು.

ಉಪಾಧ್ಯಕ್ಷರು : ಅವರು ಈಗಾಗಲೇ ಅದನ್ನು ಹೇಳಿದ್ದಾರೆ.

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಉಪಾಧ್ಯಕ್ಷರೇ, ಈಶ್ವರಪ್ಪನವರು ಏನು ಸಲಹೆ ಕೊಟ್ಟಿದ್ದಾರೆ ಅದು ಆಗಬಹುದು. ನಾಡಿದ್ದರೊಳಗೆ ನಾವು ಮಾತನಾಡಿ ಇದನ್ನು ಬಗೆಹರಿಸೋಣ.

ಉಪಾಧ್ಯಕ್ಷರು : ನಾರಾಯಣ ದಾಸ್ ಅವರೇ ಈಗ ವಿರೋಧ ಪಕ್ಷದ ನಾಯಕರಾದಂಥ ಈಶ್ವರಪ್ಪನವರು ಏನು ಸಲಹೆ ಮಾಡಿದ್ದಾರೆ, ಅದಕ್ಕೆ ಒಪ್ಪಿಕೊಂಡು ತಮ್ಮ ಸ್ಥಾನಗಳಿಗೆ ಹೋಗಿ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಉಪಾಧ್ಯಕ್ಷರೇ, ನಾಳೆ ಮತ್ತು ನಾಡಿದ್ದು ಎರಡು ದಿನ ಗಡುವು ಕೊಟ್ಟು, ಎರಡು ದಿವಸದ ಒಳಾಗಾಗಿ ಕರೆಸಿ ಮಾತನಾಡತಕ್ಕಂಥ ಕೆಲಸ ಮಾಡಲಿಲ್ಲ ಎಂದರೆ ಮತ್ತೆ ತಾವು ಹೋರಾಟವನ್ನು ಮಾಡಬಹುದು.

ಉಪಾಧ್ಯಕ್ಷರು : ಅಷ್ಟರಲ್ಲಿ ಆಗಲಿಲ್ಲ ಎಂದರೆ ನೀವು ಮತ್ತೆ ಹೋರಾಟ ಮಾಡಿ. ನಿಮಗೆ ಯಾರೂ ಅಡ್ಡಿ ಮಾಡುವುದಿಲ್ಲ. 30ನೇ ತಾರೀಖಿನವರೆಗೆ ಅಧಿವೇಶನ ಇದೆ.

ಶ್ರೀ ಕಾಗೋಡು ತಿಮ್ಮಪ್ಪ : ಆಗ ನಾವೂ ಬರುತ್ತೇವೆ. ಪಕ್ಷಾತೀತವಾಗಿ ಎಲ್ಲರೂ ಸೇರಿ ಹೋರಾಟ ಮಾಡೋಣ. ಇದಕ್ಕೆ ಒಪ್ಪಿಕೊಳ್ಳಿ.

ಶ್ರೀ ಕೆ.ಎಸ್. ಈಶ್ವರಪ್ಪ : ನಮ್ಮ ಕ್ಷೇತ್ರಗಳಲ್ಲಿ ಯಾವ ಪರಿಸ್ಥಿತಿ ಇದೆ ಎಂದರೆ, ಹೊನ್ನಾಳಿಗೆ ಹಿರೇಕಲ್ಲುಮಠದ ಸ್ವಾಮಿಗಳನ್ನು ಸನ್ಯಾನಕ್ಕೆ ಕರೆದರೆ, ಅಲ್ಲೇ ನಮಗೆ ಊರ ಜನರೆಲ್ಲಾ ಸೇರಿ ಮುತ್ತಿಗೆ ಹಾಕಿದರು.

ಉಪಾಧ್ಯಕ್ಷರು : ಒಂದು ಒಳ್ಳೆಯ ಸೂಚನೆ ತಂದಿದ್ದಾರೆ. ಅದಕ್ಕೆ ತಾವು ಒಪ್ಪಿ ದಯಮಾಡಿ ತಮ್ಮ ಸ್ಥಾನಗಳಿಗೆ ಹೋಗಿ. ಬಸಪ್ಪನವರೇ, ನಾರಾಯಣ ದಾಸ್‌ರವರೇ ನಿಮ್ಮ ಜಿಲ್ಲಾ ಮಂತ್ರಿಗಳು ವಿನಂತಿ ಮಾಡಿಕೊಂಡಿದ್ದಾರೆ. ಈಗ ನಾವು ಅನಿವಾರ್ಯವಾಗಿ ಸದನದ ಸಮಯವನ್ನು ವ್ಯರ್ಥ ಮಾಡಲು ಆಗುವುದಿಲ್ಲ. ದಯಮಾಡಿ ಕಾಗೋಡು ತಿಮ್ಮಪ್ಪನವರು ತಮ್ಮ ಬೇಡಿಕೆಯ ಮೇಲಿನ ಚರ್ಚೆಯನ್ನು ಪ್ರಾರಂಭ ಮಾಡಬೇಕು. ನಾರಾಯಣ ದಾಸ್ ಅವರೇ, ಬಸಪ್ಪನವರೇ ದಯಮಾಡಿ ತಮ್ಮ ಸ್ಥಾನಕ್ಕೆ ಹಿಂತಿರುಗಿ. ಕಾಗೋಡು ತಿಮ್ಮಪ್ಪನವರೇ ತಾವು ಬನ್ನಿ. ತಾವು ಬೇಡಿಕೆಯ ಮೇಲೆ ಚರ್ಚೆಯನ್ನು ಪ್ರಾರಂಭಮಾಡಿ. ಎಲ್ಲರೂ ವಿನಂತಿ ಮಾಡುಕೊಂಡರೂ ಅವರು ಹೋಗಲಿಲ್ಲ ಎಂದರೆ ಅವರಿಗೆ ನಾವು ಇನ್ನು ಯಾವ ರೀತಿಯಲ್ಲಿ ಹೇಳುವುದು? ವಿರೋಧ ಪಕ್ಷದ ನಾಯಕರು ಎಲ್ಲರೂ ಹೇಳಿದ್ದಾರೆ. ಒಂದು ದಿವಸದ ಮಟ್ಟಿಗೆ ಪರೀಕ್ಷೆ ಮಾಡುತ್ತೀರಿ? ಕಾಗೋಡು ತಿಮ್ಮಪ್ಪನವರೇ ತಾವು ಬೇಡಿಕೆಯ ಮೇಲೆ ಚರ್ಚೆಯನ್ನು ಪ್ರಾರಂಭ ಮಾಡಿ.

3.50 ಪಿಎಂ

(ಮುಂದು)

ಶ್ರೀ ಮಾಲಕಯ್ಯ ವಿ ಗುತ್ತೇದಾರ್ : ಗುಲ್ಬರ್ಗಾ ಜಿಲ್ಲೆ ಆಳಂದ ತಾಲ್ಲೂಕಿನಲ್ಲಿ ಕೂಡ ಅತಿವೃಷ್ಟಿಯಾಗಿ ಬಹಳಷ್ಟು ಪಂಪ್‌ಸೆಟ್‌ಗಳು ಮತ್ತು ಮೋಟಾರ್‌ಗಳು, ಬಂಡು, ತೆರೆದ ಬಾವಿಗಳು ಹಾಗು ಎಲ್ಲಾ ಬೋರ್‌ವೆಲ್‌ಗಳೂ ಹಾಳಾಗಿವೆ. ರೈತರಿಗೆ ಅಲ್ಲಿ ಪರಿಹಾರಧನ ಸಿಕ್ಕಿಲ್ಲ. ಗುಲ್ಬರ್ಗಾ ಜಿಲ್ಲೆ, ಆಳಂದ ತಾಲ್ಲೂಕಿನ ಬಗ್ಗೆಯೂ ಸ್ವಲ್ಪ ಮಂತ್ರಿಗಳು ಹೇಳಬೇಕು.

ಉಪಾಧ್ಯಕ್ಷರು : ಒಂದು ನೋಟಿಸ್ ಕಳುಹಿಸಿ ಕೊಡಿ. ಅದಕ್ಕೆ ಅವರು ಉತ್ತರ ಕೊಡುತ್ತಾರೆ. ತಿಮ್ಮಪ್ಪನವರೇ ತಾವು ಬೇಡಿಕೆ ಮೇಲೆ ಚರ್ಚೆ ಪ್ರಾರಂಭ ಮಾಡಿ. ಖರ್ಗೆಯವರೆ ತಾವು ಸ್ವಲ್ಪ ಅವರ ಮನಸ್ಸು ಪರಿವರ್ತನೆ ಮಾಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಲ್ಲಿನ ಪರಿಸ್ಥಿತಿ ನೋಡಿ ಅವರು ಕುಳಿತಿದ್ದಾರೆ. ಮುಖ್ಯಮಂತ್ರಿಗಳು ಬಂದರೆ, ಸಮಾಧಾನವಾದ ಹೇಳಿಕೆ ಕೊಟ್ಟರೆ ಏನಾದರೂ ಅವರು ಮಾಡಬಹುದು.

ಉಪಾಧ್ಯಕ್ಷರು : ಈಗ ಶ್ರೀ ಈಶ್ವರಪ್ಪನವರು ಏನು ಒಂದು ಸಲಹೆ ಕೊಟ್ಟಿದ್ದಾರೆ, ಅದು ಬಹಳ ಒಳ್ಳೆಯ ಸಲಹೆ. ನಾಳೆ ಸಾಯಂಕಾಲದೊಳಗೆ ಕಾರ್ಯಕ್ರಮ ಮಾಡೋಣ, ಎಂದು ಹೇಳಿದ್ದಾರೆ ಅದು ಬಹಳ ಒಳ್ಳೆಯ ಸಲಹೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾಳೆ ಒಂದು ದಿವಸ ಟೈಮ ಕೊಡಿ. ಇನ್ನೂ ಬೇರೆಯವರ ಸಪೋರ್ಟ್ ಬೇಕಾದರೆ ತೆಗೆದುಕೊಳ್ಳಿ. ಇಲ್ಲದಿದ್ದರೆ ನಾಳೆ ಒಂದು ದಿವಸ ನೋಡೋಣ. ಅವರು ಹೇಗೂ ಟೈಮ್ ಕೊಟ್ಟಿದ್ದಾರೆ. ನಾಳೆ ಆಗದಿದ್ದರೆ, ಯಥಾಪ್ರಕಾರ ಮಾಡಿ.

(ಗೊಂದಲ)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಾಳೆ ಬರುತ್ತೀರಿ, ಆಗ ಕುಳಿತುಕೊಳ್ಳಿ.

ಒಬ್ಬ ಮಾನ್ಯ ಸದಸ್ಯರು : ನಾಳೆ ಮತ್ತೆ ಬರದ ಹಾಗೆ ಏನಾದರೂ ಮಾಡಿ.

(ಶ್ರೀ ಡಿ.ನಾರಾಯಣ ದಾಸ್ ಅವರು ಧರಣಿ ಬಿಟ್ಟು ತಮ್ಮ ಸ್ಥಾನಕ್ಕೆ ಹೋದರು)

ಉಪಾಧ್ಯಕ್ಷರು : ನಾರಾಯಣದಾಸ್‌ರವರಿಗೆ, ಬಸಪ್ಪನವರಿಗೆ ಧನ್ಯವಾದಗಳನ್ನರ್ಪಿಸಿ ತಾವು ಬೇಡಿಕೆ ಮೇಲೆ ಚರ್ಚೆ ಪ್ರಾರಂಭ ಮಾಡಿ.

ಶ್ರೀ ಎಂ. ಬಸಪ್ಪ : ಜೈಲಿನಲ್ಲಾದರೂ ಇರಬಹುದು. ಇಲ್ಲಿ ತಾವು ಕುಳಿತುಕೊಳ್ಳುವುದಕ್ಕೆ ಬಿಡುವುದಿಲ್ಲ. ನನಗೆ ಗೊತ್ತು ಜೈಲಿನಲ್ಲಾದರೆ ಯಾರೂ ಮುಟ್ಟುವುದಕ್ಕೆ ಬರುವುದಿಲ್ಲ. ಆದರೆ ಇಲ್ಲಿ ಕುಳಿತುಕೊಂಡರೆ ನಮ್ಮ ಪಕ್ಷದವರು, ಆ ಕಡೆಯವರು, ಈ ಕಡೆಯವರು ಎಲ್ಲರಿಂದಲೂ ಹೇಳಿಸುತ್ತೀರಿ.

ಉಪಾಧ್ಯಕ್ಷರು : ಬಾವಿಗೆ ಬಿದ್ದಾಗ ಎತ್ತಲು ಎಲ್ಲರೂ ಪ್ರಯತ್ನ ಮಾಡಲೇಬೇಕಲ್ಲವೇ?

ಶ್ರೀ ಡಿ. ನಾರಾಯಣ ದಾಸ್: ನಾನು ಮೊದಲೇ ಹೇಳಿದೆ. ಈ ಸಮಸ್ಯೆ ಬಹಳ ಉಲ್ಬಣ ಪರಿಸ್ಥಿತಿಯಲ್ಲಿದೆ. ನಾನು ನನ್ನ ಕ್ಷೇತ್ರಕ್ಕೆ ಹೋಗುವ ಹಾಗಿಲ್ಲ. ಹರಪನಹಳ್ಳಿ ಹತ್ತಿ ಉರಿಯುತ್ತಿದೆ. ಇದುವರೆಗೆ ಅದು ಬೂದಿ ಮುಚ್ಚಿದ ಕೆಂಡದಂತೆ ಇತ್ತು. ಅವರ ಕ್ಷೇತ್ರಗಳೂ ಅಷ್ಟೇ. ಹೊನ್ನಾಳಿ ಉರಿಯುತ್ತಿದೆ. ಜಗಳೂರಿನಲ್ಲೂ ಗಲಾಟೆಯಾಗುತ್ತಿದೆ. ಚನ್ನಗಿರಿಯಲ್ಲಿ ಹರತಾಳವಾಗಿದೆ. ಜನರಿಗೆ ವಿರುದ್ಧವಾಗಿ ನೀವು ಇದನ್ನು ಮಾಡುವ ಅವಶ್ಯಕತೆ ಇತ್ತೆ? ಮುಖ್ಯಮಂತ್ರಿಗಳು ಏತಕ್ಕೆ ಇದರಲ್ಲಿ ಕೈಹಾಕಲಿಲ್ಲ.

ಉಪಾಧ್ಯಕ್ಷರು : ತಮ್ಮ ಪ್ರತಿಭಟನೆಯನ್ನು ತಾವು ವ್ಯಕ್ತಪಡಿಸಿರುವಿರಿ.

ಶ್ರೀ ಡಿ. ನಾರಾಯಣ ದಾಸ್ : ಈ ವಿಚಾರವಾಗಿ ವಿರೋಧ ಪಕ್ಷದ ನಾಯಕರು ಮತ್ತು ಇತರ ಮುಖಂಡರು ಹೇಳಿದಂತೆ ಅವರ ಮಾತಿಗೆ ಬೆಲೆ ಕೊಟ್ಟು ಇವತ್ತು ನಾವು ಸಧ್ಯಕ್ಕೆ ಧರಣಿಯನ್ನು ಸ್ಥಗಿತ ಮಾಡುತ್ತೇವೆ. ನಾಳೆ, ನಾಡಿದ್ದು ಮುಖ್ಯಮಂತ್ರಿಗಳು ಇಲ್ಲಿ ಬಂದು ಸ್ಟೇಟ್‌ಮೆಂಟ್ ಕೊಡಬೇಕು. ಈಗ ಆಗಿರುವಂಥ ನೋಟಿಫಿಕೇಶನ್ ವಿತ್‌ಡ್ರಾ ಮಾಡಿದರೆ ಮಾತ್ರ ಇದು ಪರಿಹಾರವಾಗುತ್ತೆ.

ಇಲ್ಲದಿದ್ದರೆ ಮಾತುಕತೆಯಿಂದ ಏನೂ ಪ್ರಯೋಜನವಾಗುವುದಿಲ್ಲ. Categorically he shoul come and express. ಈ ಗಲಾಟೆ ಇರತಕ್ಕಂಥ ತಾಲ್ಲೂಕುಗಳನ್ನು ನಾವು ಕೈ ಬಿಟ್ಟಿದ್ದೇವೆ ಎಂದ ಹೇಳಿ ನಾಳೆ ಅಥವಾ ನಾಡಿದ್ದು ಪೂರ್ತಿಯಾಗುವುದರೊಳಗೆ ಆ ಸ್ಟೇಟಮೆಂಟ ಬರದೆ ಇದ್ದರೆ ನಾವ ಮತ್ತೆ ಧರಣಿ ಪ್ರಾರಂಭ ಮಾಡುತ್ತೇವೆ. ಏಕೆಂದರೆ ಹಿರಿಯರು, ವಿರೋಧ ಪಕ್ಷದ ನಾಯಕರು ಇತರ ಮುಖಂಡರು ಮತ್ತು ಆ ಕಡೆಯ ಕೆಲವು ಮಂತ್ರಿಗಳು ಹೇಳಿರುವುದರಿಂದ ಸಧ್ಯಕ್ಕೆ ನಾವ ಧರಣಿಯನ್ನು ಸ್ಥಗಿತ ಮಾಡುತ್ತೇವೆ.

ಉಪಾಧ್ಯಕ್ಷರು : ತಮಗೆ ಧನ್ಯವಾದಗಳು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಎಂ.ಪಿ. ಪ್ರಕಾಶ್‌ರವರನ್ನೂ ಆ ಪಟ್ಟಿಯಲ್ಲಿ ಸೇರಿಸಿಕೊಳ್ಳಿ

ಶ್ರೀ ಎಂ.ಪಿ. ಪ್ರಕಾಶ್ : ಅವರು ನಮ್ಮ ಮಾತನ್ನು ಕೇಳಿ ಧರಣಿಯನ್ನು ವಿತ್‌ಡ್ರಾ ಮಾಡಿಕೊಂಡಿಲ್ಲ ಹಾಗಿದ್ದರೆ ನಾವು ಏನಾದರೂ ಮಾಡಬಹುದಾಗಿತ್ತು. ನನ್ನ ಮಾತನ್ನು ಅವರು ಕೇಳಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಏನು ಹೇಳಿದ್ದಾರೆ ಗೊತ್ತೆ? ಈ ಕಡೆ ಮಂತ್ರಿಗಳು ಆ ಕಡೆ ವಿರೋಧ ಪಕ್ಷದವರು ಎಲ್ಲರೂ ಹೇಳಿದ್ದಕ್ಕಾಗಿ ನಾವು ಧರಣಿ ಸ್ಥಗಿತ ಮಾಡಿದ್ದೇವೆ ಎಂದ ಅವರು ಹೇಳಿದ್ದಾರೆ.

ಉಪಾಧ್ಯಕ್ಷರು : ಹಾಗೇನೂ ಹೇಳಿಲ್ಲ, ಮಂತ್ರಿಗಳ ಮಾತನ್ನೂ, ವಿರೋಧ ಪಕ್ಷದ ನಾಯಕ ಮಾತನ್ನೂ ಕೇಳಿದ್ದಾರೆ. ಇಬ್ಬರ ಮಾತನ್ನೂ ಕೇಳಿದ್ದೇವೆ ಎಂದು ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹೋಗಲಿ ನಿಮ್ಮ ಮಾತನ್ನು ಕೇಳುವವರೆಗೆ ಅವರನ ಹೀಗೆಯೇ ಕೊಡಿಸೋಣವೆ?

ವಿತ್ತೀಯ ಕಾರ್ಯಕಲಾಪಗಳು

1997-98ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ (ಮುಂದು) :

+ಶ್ರೀ ಕಾಗೋಡು ತಿಮಪ್ಪ (ಸಾಗರ) : ಈ ದಿವಸ ನಮ್ಮ ಮುಂದೆ ಇರತಕ್ಕಂಥ ಬೇಡಿಕೆಗಳನ ನೋಡಿದರೆ ಬಹುಶಃ ಮಾನ್ಯ ಅಧ್ಯಕ್ಷರೇ ನಾವು ಅನೇಕ ಚರ್ಚೆಗಳಿಂದ ಜಾರಿ ಹೋಗುತ್ತಿದ್ದೇವ ಎನಿಸುತ್ತದೆ. ಹಿಂದೆ ಎಂದೂ ಇಷ್ಟು ಬೇಡಿಕೆಗಳನ್ನು ಒಂದೇ ದಿವಸ ಒಂದೇ ಕಾರ್ಯಕ್ರಮ ಪಟ್ಟಿಯಲ್ಲ ಸೇರಿಸಿರತಕ್ಕಂಥ ಸಂದರ್ಭ ಇರಲಿಲ್ಲ. ಆದರೆ ಇವೊತ್ತು ಕೆಲವು ಪ್ರಮುಖವಾದಂಥ ಇಲಾಖೆಯ ಬೇಡಿಕೆಗಳನ್ನು ಪ್ರತ್ಯೇಕ ದಿನದಲ್ಲಿ ಚರ್ಚೆ ಮಾಡತಕ್ಕಂಥ ಪದ್ಧತಿ ಇತ್ತು. ಆ ರೀತಿ ಮಾಡಿದಂಥ ಸಂದರ್ಭವೂ ಕೂಡ ಇತ್ತು. ಆದರೆ ಸರ್ಕಾರ ಇಷ್ಟೊಂದು ಬೇಡಿಕೆಗಳನ್ನು, ಅದರಲ್ಲಿಯೂ ಪ್ರಮುಖವಾಗಿರತಕ್ಕಂಥ ಬೇಡಿಕೆಗಳನ್ನೆಲ್ಲಾ ಒಂದೇ ದಿನದಲ್ಲಿ ಸೇರಿಸಿರುವ ರೀತಿ ಮತ್ತು ನೀತಿ ನನಗಂತೂ ಸಮಾಧಾನ ತಂದಿಲ್ಲ. ನಾನು ಅದನ್ನು ಕಟುವಾಗಿ ಟೀಕೆ ಮಾಡುತ್ತೇನೆ. ಆದುದರಿಂದ ನಾನು ವಿಶೇಷವಾ